ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ಸೊಸೈಟಿಗಳಿಗೆ ಸಿಬ್ಬಂದಿಯನ್ನೊದಗಿಸಿದುದು ಆರು ತಿಂಗಳಿಗೆ ಮಾತ್ರವಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಪ್ರಾರಂಭದಲ್ಲಿ ಆರು ತಿಂಗಳಿಗೆ ಸಿಬ್ಬಂದಿಯನ್ನು ಕೊಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಅದನ್ನು ಮುಂದುವರಿಸುವುದಕ್ಕೆ ಏನು ಏರ್ಪಾಡುಮಾಡಿದ್ದೀರಿ?

ಶ್ರೀ ಟಿ. ಮರಿಯಪ್ಪನವರು.—ಈ ವಿಚಾರ ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಎಸ್. ರಂಗರಾಮಯ್ಯನವರು.—ತಾವು ಈ ಸಿಬ್ಬಂದಿಯನ್ನು ಮುಂದುವರಿಸದೇ ಹೋದರೆ ಆವರಿಗೆ ನಂಬಿಕೆ ಕೊಟ್ಟು ಇಟ್ಟುಕೊಳ್ಳುವುದಕ್ಕೆ ಈ ಸಂಘಗಳಿಗೆ ಸಾಧ್ಯವಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಈ ರೀತಿ ತೊಂದರೆಯಿದೆಯೆಂದು ಕೆಲವು ಸೊಸೈಟಿಗಳಿಂದ ನಮಗೆ ತಿಳಿದು ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಆದುದರಿಂದ ಜಾಗ್ರತೆ ಸಿಬ್ಬಂದಿಯನ್ನು ಕೊಡುವ ವಿಷಯದಲ್ಲಿ ತೀರ್ಮಾನಮಾಡುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ ಜಿಲ್ಲೆ).—ತಿರುವೆನ್ನೂ ಇಕ್ಸೆಕ್ಟರು ಹೋಬಳಿಗಳ ಸೊಸೈಟಿಗಳಿಗೆ ಸೆಕ್ರೆಟರಿಯವರೆಂದು ಹೇಳಿದ್ದೀರಿ, ಇವರಲ್ಲಿ ಎಷ್ಟು ಜನ ಆಯಾ ಸ್ಥಳದಲ್ಲೇ ವಾಸವಾಗಿದ್ದಾರೆ?

ಶ್ರೀ ಟಿ. ಮರಿಯಪ್ಪನವರು,—ಅಲ್ಲೇ ವಾಸಮಾಡಬೇಕೆಂದು ಸರ್ಕಾರದ ಆಜ್ಞೆ ಇದೆ. ಎಲ್ಲೋ ಕೆಲವು ಕಡೆ ಮನೆಗಳು ಸಿಕ್ಕದೇ ಇರುವುದರಿಂದ ಬೇರೆ ಕಡೆ ಇರಬಹುದು. ಆದರೂ ಅಲ್ಲೇ ಅವರು ವಾಸಮಾಡಬೇಕೆಂದು ಸರ್ಕಾರಿ ಆಜ್ಞೆ ಅವರಿಗೆ ಹೋಗಿದೆ.

ಶ್ರೀ ಕೆ. ವಿ. ಶಂಕರಗೌಡರು.—ಅವರು ಸೊಸೈಟಿಗೆ ಸಂಬಂಧಪಟ್ಟ ಎಲ್ಲ ಕಾಗದ ಪತ್ರಗಳಿಗೂ ರುಜು ಹಾಕಬೇಕೆಂದಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಅವರು 'ಎಕ್ಸ್ ಆಫಿಷಿಯೋ' ಸೆಕ್ರೆಟರಿ ಆಗಿ ಎಷ್ಟು ಕೆಲಸ ಮಾಡಬೇಕೋ ಅಷ್ಟನ್ನೂ ಮಾಡಬೇಕು.

ಶ್ರೀ ಕೆ. ವಿ. ಶಂಕರಗೌಡರು.—ಅವರು ಹಾಗೆ ಮಾಡುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಆದರೆ ಕೆಲವು ಕಡೆ ಅಸಿಸ್ಟೆಂಟ್ ಸೆಕ್ರೆಟರಿಗಳನ್ನಿಟ್ಟುಕೊಂಡು ಕೆಲಸಮಾಡುತ್ತಿದ್ದಾರೆ. ಹೀಗೆ ಮಾಡಿ ಇವರೂ ಪದೇ ಪದೇ 'ಚೆಕ್' ಮಾಡಿಕೊಂಡು ಕೆಲಸಮಾಡುವುದಕ್ಕೆ ಸಾಧ್ಯವಿದೆ.

Working of Rural Development Scheme.

*Q.—119. Sri G. VEERAPPA (Chitaldrug District—General).—

Will the Government be pleased to state:—

(*a*) whether they are aware that the Rural Development Scheme is not being successfully worked out for want of adequate funds and powers for the committees;

(*b*) whether they are aware that due to want of funds and also for want of powers, the scheme has remained only as a paper scheme?

A.—Sri T. MARIAPPA (Home Minister).—

(*a*) No.

(*b*) No.

ಶ್ರೀ ಜಿ. ವೀರಪ್ಪನವರು.—ಡೆವಲಪ್‌ಮೆಂಟ್ ಕಮಿಟಿಗಳಿಗೆ 1949-50 ನೆಯ ಸಾಲಿನಲ್ಲಿ ಡಿಸ್ಟ್ರಿಕ್ಟ್‌ವಾರು ಎಷ್ಟೆಷ್ಟು ಹಣವನ್ನು ಕೊಡಲಾಗಿದೆ?

*ಶ್ರೀ ಟಿ. ಮರಿಯಪ್ಪನವರು.—ಹೇಳುತ್ತೇನೆ. We have given as follows:—

Name of District	Rural water supply	Rural communications	Drainage
	Rs.	Rs.	Rs.
Bangalore Urban ...	20,000	20,000	8,000
Bangalore Rural ...	50,000	30,000	10,000
Mandya ...	30,000	30,000	8,000
Mysore ...	45,000	30,000	10,000
Hassan ...	30,000	20,000	10,000
Chikmagalur ...	25,000	20,000	10,000
Shimoga ...	35,000	30,000	10,000
Chitaldrug ...	45,000	30,000	9,000
Tumkur ...	45,000	30,000	9 000
Kolar ...	45,000	30,000	8,000

ಇದಲ್ಲದೆ ನೀರಿನ ಬಾವಿಗಳಿಗೆ ಬೇರೆ ಕೊಟ್ಟಿದೆ. ಒಟ್ಟು 23 ಲಕ್ಷ ರೂಪಾಯಿ ಆಗುತ್ತದೆ.

ಶ್ರೀ ಜಿ. ವೀರಪ್ಪನವರು.—ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಯ ಚೇರ್ಮನರಿಗೆ ಎಷ್ಟು ಅಲೋಯನ್ಸ್ ಕೊಡುವುದು?

ಶ್ರೀ ಟಿ. ಮರಿಯಪ್ಪನವರು.—100 ರೂಪಾಯಿ.

ಶ್ರೀ ಜಿ. ವೀರಪ್ಪನವರು.—ಇದ ಸಾಕಾಗುವುದಿಲ್ಲ, ಕೆಲಸ ನಡೆಸಲು ಕಷ್ಟವಾಗಿದೆಯೆಂದು ಮನವಿ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಏತಕ್ಕೆ ಕಷ್ಟ?

Sri G. VEERAPPA.—Have any complaints been received from the chairmen of District Development Committees that they cannot discharge their duties properly with this small allowance?

Sri T. MARIAPPA.—They are very honourable people and I do not think they have claimed anything.

Sri G. VEERAPPA.—No question of 'honour.' Has any allowance been paid to the Chairmen of Taluk Committees?

Sri T. MARIAPPA.—No.

ಶ್ರೀ ಜಿ. ವೀರಪ್ಪನವರು.—ಅವರಿಗೆ ಕರ್ತವ್ಯಅನ್ಸ್ ಏನಾದರೂ ಕೊಟ್ಟಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಜಿ. ವೀರಪ್ಪನವರು.—ಈಗ ಕೊಡುತ್ತಿರುವುದು ಬಹಳ ಕಡಿಮೆ, ಕೆಲಸಮಾಡುವುದಕ್ಕಾಗುವುದಿಲ್ಲ ಎಂದು ನಿರ್ಣಯಮಾಡಿ ಯಾರೂ ಕಳುಹಿಸಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಮಾಡಬೇಕಾದ ಕೆಲಸ ಬಹಳವಿದೆ. ಈಗ ಆಗಿರುವುದು ಕಡಿಮೆ. ಶತ

ಮಾನದಿಂದ ಬಿದ್ದಿರುವ ಕೆಲಸವನ್ನೆಲ್ಲಾ ಒಂದೆರಡು ವರ್ಷಗಳಲ್ಲಿ ಮಾಡುವುದಕ್ಕಾಗುವುದಿಲ್ಲ. ಎಷ್ಟು ಹಣ ವನ್ನೊದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನು ಒದಗಿಸಿ ವರ್ಷ್ ವರ್ಷ್ ಕೆಲಸಮಾಡಬೇಕು.

ಶ್ರೀ ಜಿ. ವೀರಪ್ಪನವರು.—ತಾಲ್ಲೂಕು ಸಮಿತಿಗಳ ಸದಸ್ಯರಿಗೆ ಪ್ರಯಾಣ ಭತ್ಯವಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಜಿ. ವೀರಪ್ಪನವರು.—ಈ ಕಾರಣದಿಂದ ವಿಸ್ತರಣಾಂಗಗಳು ಸರಿಯಾಗಿ ನಡೆಯುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಸರಿಯಾಗಿ ನಡೆಯುತ್ತಿವೆ ; ಕೆಲಸಗಳಿಗೆ ಇನ್ನೂ ಹಣಬೇಕು ಎಂದು ಕೂಡ ಅವರಿಂದ ಸಲಹೆಗಳು ಬರುತ್ತಿವೆ.

Sri G. VEERAPPA.—Under whom do the District Development Committees work? Is it under the Deputy Commissioner or under the Commissioner for Rural Development?

Sri T. MARIAPPA.—The Rural Development Commissioner will supervise and the Deputy Commissioner acts as a Liaison Officer.

Sri H. C. LINGA REDDY (Kolar District—General).—Have you supplied the districts with vans as part of the Rural Development Scheme?

Sri T. MARIAPPA.—Yes, we have supplied.

Sri H. C. LINGA REDDY.—Is it true that many of them are not working for want of proper equipment and operators?

Sri T. MARIAPPA.—It is partly true.

Sri H. C. LINGA REDDY.—Has it come to your notice that the van supplied to the Kolar District has no equipment or operator for the past 1½ years?

Sri T. MARIAPPA.—Government have sanctioned the staff. Unfortunately we are not able to get a qualified man.

Sri H. C. LINGA REDDY.—Is Monday labour part of the rural development programme?

Sri T. MARIAPPA.—Certainly.

Sri H. C. LINGA REDDY.—Is it working well?

Sri T. MARIAPPA.—Wherever there is local initiative, it is going on well.

Sri H. C. LINGA REDDY.—Is it working well all over the State?

Sri T. MARIAPPA.—Where people take a keen interest; in other places unfortunately it has not been working well.

Sri H. C. LINGA REDDY.—Do the Government consider it necessary to make it compulsory in view of the fact that a lot of work has got to be done and also they are not supplying enough funds for rural development work?

Sri T. MARIAPPA.—Sir, it is one of the essential functions of the Rural Development Committees that they should induce rural people to put in one day's labour for the uplift of the rural areas. But the question is whether it should be made compulsory or whether it should be voluntary. Government have considered the question and have come to the conclusion that it should be voluntary on the part of the village panchayet to get the work done.

Sri H. C. LINGA REDDY.—My question is, whether it is necessary that it should be made compulsory now?

(No answer.)

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ರೂರಲ್ ಡೆವಲಪ್‌ಮೆಂಟ್ ಯೋಜನೆ ಜಯ ಪ್ರದವಾಗದೇ ಇರುವುದಕ್ಕೆ ಸಾಕಷ್ಟು ಹಣ ಮತ್ತು ಸಾಕಷ್ಟು ಅಧಿಕಾರ ಅವರಿಗೆ ಇಲ್ಲದೇಯಿರುವುದೇ ಕಾರಣವಲ್ಲವೆ ಎಂದು ಕೇಳಿರುವುದಕ್ಕೆ. 'ಅಲ್ಲ' ಎಂದು ಉತ್ತರ ಹೇಳಿದ್ದೀರಿ, ಹಾಗಾದರೆ ಇನ್ನಾವ ಕಾರಣ ?

ಶ್ರೀ ಟಿ. ಮರಿಯಪ್ಪನವರು.—ಬರಿಯ ಹಣವೇ ಮುಖ್ಯವಲ್ಲ. ಜನರಲ್ಲಿ ಉತ್ಸಾಹ ಹೆಚ್ಚಬೇಕು, ಸಂಘ ಟನೆಯಾಗಬೇಕು, ದೇಶದ ಅಭಿವೃದ್ಧಿಯ ಕಡೆಗೆ ಎಲ್ಲರ ದೃಷ್ಟಿಯೂ ಹೋಗಬೇಕು ಎಂಬ ಉದ್ದೇಶದಿಂದ ಈ ಯೋಜನೆಯನ್ನು ಮಾಡಿದ್ದು.....

Sri H. M. CHANNABASAPPA.—My question is specific: what are the other reasons that have made this scheme unsuccessful?

Sri K. CHENGALARAYA REDDY (Leader of the House).—Who said it was unsuccessful?

Sri T. MARIAPPA.—I never said that it was unsuccessful.

Sri H. M. CHANNABASAPPA.—There is a question 'whether for want of funds this has been only a paper scheme' and the answer is 'no'. What are the other reasons that have made it a paper scheme?

Sri T. MARIAPPA.—It is not a paper scheme. I repudiate the insinuation.

Sri G. A. ACHARYA (Bangalore District—General).—All schemes are written on paper! (Laughter).

Mushir-ul-Mulk J. MAHOMED IMAM (Chitaldrug *cum* Tumkur—Muslim).—Schemes cannot be written on water!.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪಂಗಡ).—ರೂರಲ್ ಡೆವಲಪ್‌ಮೆಂಟ್ ಫಂಡಿನಿಂದ ನೀರು ಸರಬರಾಯಿ ಬಾಬಿಗೆ ಕೊಟ್ಟಿರುವುದು ಸಾಲದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಎಷ್ಟು ಸಾಧ್ಯವೋ ಅಷ್ಟೂ ಒದಗಿಸುತ್ತೇವೆ. ಅನೇಕ ವರ್ಷಗಳಿಂದ ನಿಂತಿರುವ ಕೆಲಸಗಳೆಲ್ಲವನ್ನೂ ಒಂದೇ ವರ್ಷದಲ್ಲಿ ಮಾಡಲು ಸಾಧ್ಯವಿಲ್ಲ.

ಶ್ರೀ ಟಿ. ಹನುಮಯ್ಯನವರು.—ಒಂದೊಂದು ಜಿಲ್ಲೆಗೆ ಎಷ್ಟೆಷ್ಟು ಹಣ ಒದಗಿಸಿದ್ದೀರಿ ?

ಶ್ರೀ ಟಿ. ಮರಿಯಪ್ಪನವರು.—ಈಗ ತಾನೇ ಹೇಳಿದೆ.

ಶ್ರೀ ಟಿ. ಹನುಮಯ್ಯನವರು.—ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಗಳ ಚೇರ್ಮನ್ನರುಗಳ ಹೆಸರಿಕೆ ನಿಮ್ನ ಪಂಗಡಕ್ಕೆ ಸೇರಿದವರೆಷ್ಟು ಮಂದಿ ?

ಶ್ರೀ ಟಿ. ಮರಿಯಪ್ಪನವರು.—ಇದಕ್ಕೆ ಸಂಬಂಧವಿಲ್ಲ.

ಶ್ರೀ ಎಸ್. ಹುಚ್ಚುಮಾಸ್ತಿಗೌಡರು (ತುಮಕೂರು ಜಿಲ್ಲೆ).—ಕೇಂದ್ರ ಡೆವಲಪ್‌ಮೆಂಟ್ ಸಮಿತಿ ಇನ್ನೂ ರಚನೆಯಾಗದೇ ಇರುವುದರಿಂದ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಯು ಕೆಲಸಗಳಿಗೆ ತೊಂದರೆಯಾಗಿದೆಯೆಂಬುದು ಗೊತ್ತೆ ?

ಶ್ರೀ ಟಿ. ಮರಿಯಪ್ಪನವರು.—ಸ್ವಲ್ಪಮಟ್ಟಿಗೆ ತೊಂದರೆಯಾಗಿದೆಯೆಂದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಸ್. ಹುಚ್ಚುಮಾಸ್ತಿಗೌಡರು.—ಇಷ್ಟು ದಿವಸವಾದರೂ ರಚನೆಮಾಡದೇಯಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಮರಿಯಪ್ಪನವರು.—ಈಗಾಗಲೇ ಸ್ಥಳೀಯ ಸಂಸ್ಥೆಗಳ ಇಂಟಿಗ್ರೇಷನ್ ಸಮಿತಿಯವರು ಅವರ ಕೆಲಸವನ್ನು ಮುಗಿಸುತ್ತಿದ್ದಾರೆಂದು ವರ್ತಮಾನ ಬಂದಿದೆ. ಅವರು ವರದಿ ಬಂದಮೇಲೆ ಇಷ್ಟರಲ್ಲೇ ಇತ್ಯರ್ಥವಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗಾ ಜಿಲ್ಲೆ).—ಎಷ್ಟು ದಿನದಿಂದ ಈ ನೀತಿಯನ್ನು ಅನುಸರಿಸುತ್ತಿದ್ದೀರಿ ?

ಶ್ರೀ ಟಿ. ಮರಿಯಪ್ಪನವರು.—ಎಷ್ಟು ಅಗತ್ಯವಿದೆಯೋ ಅಷ್ಟು ದುಡ್ಡು ಕೊಡುತ್ತಿದ್ದೇವೆ. ದುಡ್ಡು ಇಲ್ಲದೇ ಕೆಲಸ ಮಾಡತಕ್ಕದ್ದು ಶೇಕಡ 75 ಭಾಗ ಇದೆ, ಜನಗಳು ಸಂಘಟಿತವಾಗತಕ್ಕದ್ದು, ಯೋಗಕ್ಷೇಮ ನೋಡಿಕೊಳ್ಳತಕ್ಕದ್ದು, ವ್ಯವಸಾಯಾಭಿವೃದ್ಧಿ ಮಾಡತಕ್ಕದ್ದು, ತಳಿ ಅಭಿವೃದ್ಧಿ ಮಾಡತಕ್ಕದ್ದು—ಇವೆಲ್ಲಾ ಇವೆ. ಸರ್ಕಾರದವರು ದುಡ್ಡು ಕೊಟ್ಟು ಅನೇಕ ಕೆಲಸಗಳನ್ನು ಮಾಡಿಸಿದ್ದೇವೆ. ಉದಾಹರಣೆಗೆ ಚರಂಡಿಗಳನ್ನು ಮಾಡಿಸಿದ್ದೇವೆ. ಅದರಲ್ಲಿ ಮಣ್ಣು ತುಂಬಿಕೊಂಡಿದೆ, ತೆಗೆಯುವವರೇ ಇಲ್ಲ.

ಶ್ರೀ ಎಲ್. ಸಿದ್ದಪ್ಪನವರು.—1945ರಲ್ಲಿ ಯಾವುದಕ್ಕೂ ಸರ್ಕಾರದವರೇ ಹೆಚ್ಚು ಹಣ ಖರ್ಚು ಮಾಡಬೇಕೆಂದು ಹೇಳಿದಿರಿ. ಆಗ ಅವರು ದುಡ್ಡು ಖರ್ಚುಮಾಡಬೇಕಾಗಿತ್ತು. ಈಗ ನೀವು ಅಧಿಕಾರಕ್ಕೆ ಬಂದ ಮೇಲೆ ಈ ರೀತಿ ದುಡ್ಡಿಲ್ಲದೇ ನಡೆಸಬೇಕಾಗಿದೆಯಲ್ಲವೇ ?

ಶ್ರೀ ಟಿ. ಮರಿಯಪ್ಪನವರು.—ದುಡ್ಡು ಕೊಟ್ಟೂ ಮಾಡಿಸಿದ್ದೇವೆ. ದುಡ್ಡು ಕೊಟ್ಟ ಮೇಲೆ ಇನಿಷಿಯೇಟೀವ್ ಅವರಿಗೆ ಬರಬೇಕು. ಏನೂ ದುಡ್ಡು ಕೊಡದೇ 10 ಸಾವಿರ 20 ಸಾವಿರ ರೂಪಾಯಿ ಕೆಲಸಮಾಡಿರುವ ಹಳ್ಳಿಗಳಿವೆ. ಕೋ-ಆಪರೇಟಿವ್ ಸೊಸೈಟಿಗಳಿಗೆ 300 ರೂಪಾಯಿ ಕೊಟ್ಟಿದ್ದರೂ ಅಭಿವೃದ್ಧಿಯಾಗುತ್ತಿಲ್ಲವೇ ?

ಶ್ರೀ ಎಲ್. ಸಿದ್ದಪ್ಪನವರು.—ಜನಗಳೇ ಮುಂದೆ ಬಂದು ಸರ್ಕಾರದವರ ಸಹಾಯ ಕೇಳದೇ, ಅವರೇ ಕೆಲಸಮಾಡಿಕೊಳ್ಳುವವರೆಗೂ ಬೇಕಾದಷ್ಟು ಹೊಬಲಗು ಕೊಡುತ್ತೀರಲ್ಲವೇ ?

ಶ್ರೀ ಟಿ. ಮರಿಯಪ್ಪನವರು.—ಕೊಡುತ್ತೇವೆ. ರೂರಲ್ ಡೆವಲಪ್‌ಮೆಂಟ್‌ಗೆ ಬಡ್ಜೆಟ್‌ನಲ್ಲಿ ಅರ್ಧ ಕೋಟಿ ರೂಪಾಯಿ ಗಳವರೆಗೂ ಹೋಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ನಮಗೆ ಬೇಕಾಗಿರುವುದು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳು, ಗ್ರಾಮಾಂತರ ಪ್ರದೇಶಗಳ ರಸ್ತೆ ಸೌಕರ್ಯ. ಇವುಗಳಿಗೆ ಗ್ರಾಂಟ್ ಕೊಡಬೇಕು. ಅದು ಕ್ರಮಕ್ರಮೇಣ ಕಡಿಮೆ ಆಗುತ್ತಾ ಇದೆ. 1948-49ನೇ ಸಾಲಿನಲ್ಲಿ ಸ್ವಲ್ಪ ಜಾಸ್ತಿ ಕೊಟ್ಟಿದ್ದೀರಿ. ಆಮೇಲೆ ಈಗ ಎರಡು ವರ್ಷದಿಂದ ಕಡಿಮೆಯಾಗುತ್ತಾ ಇದೆ. ಇದರಿಂದ ಜನಗಳಿಗೆ ಎಷ್ಟು ಸಹಾಯ ಸಿಕ್ಕಬೇಕೋ ಅಷ್ಟು ಸಹಾಯ ಸಿಕ್ಕದೇ ತೊಂದರೆಯಾಗುವುದಿಲ್ಲವೆ ?

ಶ್ರೀ ಟಿ. ಮರಿಯಪ್ಪನವರು.—ಕುಡಿಯುವ ನೀರಿನ ಬಾವಿಗಳನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಕೊಟ್ಟ ಹಣ ಖರ್ಚಾಗಿಲ್ಲ. ಯಾವ ಊರಿನವರು ಬಾವಿ ಪೂರ್ತಿ ಮಾಡುತ್ತೇವೆ ಎಂದು ಹೇಳುತ್ತಾರೋ ಅವರಿಗೆ ಇನ್ನೂ ಹೆಚ್ಚಿನ ಸಹಾಯಮಾಡುತ್ತೇವೆ. ಕುಡಿಯುವ ನೀರಿನ ಬಾವಿಗೆ ಯಾವಾಗಲೂ ಇಲ್ಲವೆಂದು ಹೇಳಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ತಾವು ಮಂಜೂರು ಮಾಡಿರುವ ಹಣದಲ್ಲಿ ಬಹಳ ಕಮ್ಮಿ ಖರ್ಚಾಗಿದೆ ಎಂದು ಗೊತ್ತಾಗುತ್ತದೆ. ಗ್ರಾಮಾಂತರಗಳಲ್ಲಿರತಕ್ಕ ಅತಿ ಮುಖ್ಯವಾದ ಈ ಅನುಕೂಲತೆಗಳನ್ನು ಒದಗಿಸುವುದಕ್ಕೆ ಹೆಚ್ಚು ಹೊಬಲಗು ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಮರಿಯಪ್ಪನವರು.—ಈಚೆಗೆ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆ ಎಂದು ಕೇಳಿದ್ದೇವೆ. ಎಷ್ಟು ಬೇಕಾದರೂ ಕೊಡುವುದಕ್ಕೆ ತಯಾರಾಗಿದ್ದೇವೆ.

Mr. SPEAKER.—Next question.

Multi-purpose Co-operative Societies and their activities.

*Q.—138.—Sri T. MADIAH GOWDA (Bangalore District—General).—

Will the Government be pleased to state :—

(*a*) the number of multi-purpose co-operative societies in each district;

(*b*) the number of shareholders and the share amount collected in each district;

(*c*) the commodities that are generally sold in these societies;

(*d*) all the activities that are now taken up by these societies ?

A.—Sri T. MARIAPPA (Home Minister).—

(*a*)

Bangalore District	...	114
Hassan ,,	...	84
Mandya ,,	...	79
Chikmagalur District	...	69
Mysore ,,	...	92
Shimoga ,,	...	83
Chitaldrug ,,	...	71
Tumkur ,,	...	105
Kolar ,,	...	128